ಸಕಲೇಶಪುರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ
ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ

ಸಿ.ಸಿ.ನಂ. 66-2013

| | | | |
|---|---|---|---|
| ಸಾಕ್ಷಿದಾರರ ಹೆಸರು | ಕುಮಾರ ಸ್ವಾಮಿ | P.W | 8 |
| ತಂದೆಯ ಹೆಸರು | ರುದ್ರೇಗೌಡ | C.W | 18 |
| ವಯಸ್ಸು | 60 ವರ್ಷ | | |
| ಉದ್ಯೋಗ | ವ್ಯವಸಾಯ | ಪ್ರ.ವ.ಬೋ | |
| ವಾಸಸ್ಥಳ | ಮಳಲಿ , ಸಕಲೇಶಪುರ | ದಿನಾಂಕಃ 13-10-2022 | |

ಮುಖ್ಯ ವಿಚಾರಣೆಃ- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ಸಾಕ್ಷಿ ನಿಪಿ-2 ರ ಸ್ಥಳ ಪಂಚನಾಮೆಯಲ್ಲಿಯ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ 2 ಬಿ ಎಂದು ಗುರುತಿಸಲಾಯಿತು. ಸುಮಾರು 10 ವರ್ಷಗಳ ಹಿಂದೆ ಮಳಲಿ ಮಂಡಲ ಪಂಚಾಯಿತಿ ಬಳಿ ನಿಂತಿದ್ದಾಗ ಪೋಲೀಸರು ನನ್ನನ್ನು ಕರೆದು ಜಗಳದ ಕುರಿತಂತೆ ಒಂದು ದಾಖಲೆಗೆ ನನ್ನ ಸಹಿ ಪಡೆದರು. ನನ್ನ ಸಮಕ್ಷಮ ಏನನ್ನೂ ಅಮಾನತ್ತು ಪಡಿಸಿಕೊಂಡಿಲ್ಲ. ನಿಪಿ-2 ರಲ್ಲಿಯ ವಿಷಯದ ಬಗ್ಗೆ ಮಾಹಿತಿ ಇಲ್ಲ.

ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೊಜಕರು ಸಾಕ್ಷಿಯನ್ನು ಪ್ರತೀಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಗಿದೆ.

ಪಾಟೀ ಸವಾಲು ಮಾನ್ಯ ಸ. ಸ. ಅ. ರವರಿಂದಃ-

ದಿನಾಂಕಃ **23-11-2019** ರಂದು ಸಕಲೇಶಪುರ ತಾಲ್ಲೂಕು ಕಸಬಾ ಹೋಬಳಿ ಮಳಲಿ ಗ್ರಾಮ ಪಂಚಾಯಿತಿ ಕಛೇರಿಯಲ್ಲಿ ಪೋಲೀಸರು ಸಿದ್ದೇಗೌಡರವರು ಹಾಜರುಪಡಿಸಿದ ನಿಪಿ**-2** ರ ಮಹಜರ್ ನಲ್ಲಿ ನಮೂದಿಸಿರುವ ಕ್ರ**.**ಸಂ**. 1** ರಿಂದ **28** ರ

ದಾಖಲೆಗಳನ್ನು ಕಛೇರಿಯಲ್ಲಿ ಆರೋಪಿಯು ಮಾಡಿದ ಅವ್ಯವಹಾರದ ಕುರಿತಂತೆ ಪಂಚನಾಮೆಯನ್ನು ಬೆಳಗ್ಗೆ **11-30** ರಿಂದ ಮಧ್ಯಾಹ್ನ **1-15** ಗಂಟೆಯ ಸಮಯದವರೆಗೆ ಜರುಗಿಸಿ ಪಂಚರಾದ ನನ್ನ ಹಾಗೂ ಚಾಸಾ **1** ಮತ್ತು **17** ರವರ ಸಮಕ್ಷಮ ಪಂಚನಾಮೆ ಬರೆದು ಓದಿ ಹೇಳಿ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ**.** ನಿಪಿ**-2** ರ ವಿಷಯ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ**.**

ಮರುವಿಚಾರಣೆ**:-** ಇಲ್ಲ

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಒ

ಸಾಕ್ಷಿ ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಸಕಲೇಶಪುರ.